# 24

# ಪಶ್ಚಾತ್ತಾಪ ಹೊಂದದ ಪಟ್ಟಣಗಳು

# (11:20-24)

ಯೇಸು ಖೊರಾಜಿನೇ, ಬೆತ್ಸಾಯಿದವೇ, ಮತ್ತು ಕಪೆರ್ನೌಮಿನಲ್ಲಿ ಮಾಡಿದ ಕಾರ್ಯಗಳ ಮತ್ತು ಅದ್ಭುತಗಳ ಕುರಿತು ಸುವಾರ್ತೆಯಲ್ಲಿ ದಾಖಲಿಸಿರುವದಿಲ್ಲ (ನೋಡಿರಿ ಯೋಹಾನ 21:25). ಈ ಪಟ್ಟಣಗಳಿಗೆ ಅಮೂಲ್ಯವಾದದ್ದನ್ನು ಪ್ರಸ್ತಾಪಮಾಡಲಾಗಿತ್ತು, ಮತ್ತು ಅದನ್ನು ಆ ಪಟ್ಟಣಗಳು ಸಂಪೂರ್ಣವಾಗಿ ನಿರ್ಲಕ್ಷಮಾಡಿದವು.

## ಎರಡು ಪಟ್ಟಣಗಳಿಗೆ ಎರಡು ಸಂಕಟಗಳು (11:20-22)

**[20]ಆಗ ಆತನು ತನ್ನ ಮಹತ್ಕಾರ್ಯಗಳು ಬಹಳವಾಗಿ ನಡೆದ ಊರುಗಳು ದೇವರ ಕಡೆಗೆ ತಿರುಗಲಿಲ್ಲವೆಂದು ಅವುಗಳನ್ನು ಗದರಿಸತೊಡಗಿದನು. ಹೇಗೆಂದರೆ - ಅಯ್ಯೋ ಖೊರಾಜಿನೇ,**
**[21]ಅಯ್ಯೋ ಬೇತ್ಸಾಯಿದವೇ, ನಿಮ್ಮಲ್ಲಿ ನಡೆದ ಮಹತ್ಕಾರ್ಯಗಳು ತೂರ್ ಮತ್ತು ಸೀದೋನ್ ಪಟ್ಟಣಗಳಲ್ಲಿ ನಡೆದಿದ್ದರೆ ಅಲ್ಲಿಯವರು ಆಗಲೇ ಗೋಣೀತಟ್ಟು ಹೊದ್ದುಕೊಂಡು ಬೂದಿಯಲ್ಲಿ [ಕೂತುಕೊಂಡು] ದೇವರ ಕಡೆಗೆ ತಿರುಗಿಕೊಳ್ಳುತ್ತಿದ್ದರು.**
**[22]ಆದರೆ ನ್ಯಾಯವಿಚಾರಣೆಯ ದಿನದಲ್ಲಿ ನಿಮ್ಮ ಗತಿಗಿಂತಲೂ ತೂರ್ ಸೀದೋನ್ ಪಟ್ಟಣಗಳ ಗತಿಯು ಮೇಲಾಗಿರುವದು ಎಂದು ನಿಮಗೆ ಹೇಳುತ್ತೇನೆ.**

**ವಚನ 20. ದೇವರ ಕಡೆಗೆ** ತಿರುಗಲು ನಿರಾಕರಿಸಿದವರಿಗೆ ಯೇಸು ಹೇಳುವಾಗ ಅದನ್ನು ನಿರ್ದಿಷ್ಟವಾಗಿ ಹೇಳಿದನು. ಆತನು ತನ್ನ ಗಮನವನ್ನು ಆ ಸ್ಥಳದಲ್ಲಿ ಆತನು ಹೆಚ್ಚಿನ ಅದ್ಭುತಗಳನ್ನು ಮಾಡಿದ ಪಟ್ಟಣಗಳ ಕಡೆಗೆ ತಿರುಗಿಸಿದನು: ಖೊರಾಜಿನೇ ಬೆತ್ಸಾಯಿದೆ ಮತ್ತು ಕಪೆರ್ನೌಮಿ. "ಅದ್ಭುತ" (*dunamis*) ಎಂದು ಅರ್ಥ ಕೊಡುವ ಗ್ರೀಕ್ ಪದ ಆಗಾಗ ಅದನ್ನು "ಬಲ" ಎಂಬುದಾಗಿ ಅನುವಾದಿಸಿರುವ ಒಂದೇ ಪದವಾಗಿದೆ. ಈ ಮೂರು ಪಟ್ಟಣಗಳು ದೇವರ ಬಲವು ಅವರ ಮಧ್ಯದಲ್ಲಿದೆ ಎಂಬುದಕ್ಕೆ ಸಾಕ್ಷಿಯಾಗಿದ್ದವು, ಆದರೆ ಆತನೊಂದಿಗೆ ಇದ್ದ ಅವರ ಸಂಬಂಧವು ಬದಲಾಗಲಿಲ್ಲ. ಆತನ ಬಲವಾದ ಕಾರ್ಯಗಳು ಆತನ ದೈವೀಕ ಅಧಿಕಾರದ ಬೋಧನೆಯನ್ನು ದೃಢಪಡಿಸಿದವು, ಆದರೆ ಆ ಜನರು ಈಗಲು ನಿರಾಕರಿಸಿದರು. ಬಲವಾದ ಕಾರ್ಯಗಳು ಮತ್ತು ಆತನ ದೈವಿಕ ಅಧಿಕಾರದ ಬೋಧನೆಯು ಆದರೆ ಆ ಜನರು ಈಗಲೂ ಅವರನ್ನು ಪಶ್ಚಾತ್ತಾಪಕ್ಕೆ ನಡೆಸಲಿಲ್ಲ. ಆದದರಿಂದ, ಪಟ್ಟಣಗಳನ್ನು **ಖಂಡಿಸಲು ಪ್ರಾರಂಭಿಸಿದನು.**

**ವಚನ 21. ಅಯ್ಯೋ** (*ouai*) ಎಂದು ಅರ್ಥ ಕೊಡುವ ಗ್ರೀಕ್ ಪದ ಆಳವಾದ ಕನಿಕರ ಅಥವಾ ಬಹಳ ದುಃಖವನ್ನು ಸೂಚಿಸುತ್ತದೆ. ಆತನ ಸಂದೇಶವನ್ನು ನಿರಾಕರಿಸಿದ್ದರ ನಿಮಿತ್ತವಾಗಿ ದುಃಖಪಟ್ಟನು ಎನ್ನುವದು ಇದು ಒತ್ತಿ ಹೇಳುತ್ತದೆ. William Barclay ರವರು ಹೀಗೆ ಬರೆದಿದ್ದಾರೆ, "ಪಾಪವನ್ನು ಖಂಡಿಸಿರುವದು ಯೇಸುವಿನ ಪರಿಶುದ್ಧವಾದ ಸಿಟ್ಟಾಗಿದೆ, ಆದರೆ ಸಿಟ್ಟು ಬಂದಿರುವದು, ಕ್ರೂರತನದ ಗರ್ವದಿಂದ ಬಂದದ್ದಲ್ಲ, ಆದರೆ ಮುರಿದ ಹೃದಯದಿಂದ ಬಂದದ್ದಾಗಿದೆ."[1]

ಮೊದಲನೆಯದಾಗಿ ಕರ್ತನು ಖಂಡಿಸಿರುವದು **ಖೊರಾಜಿನೇ** ಪಟ್ಟಣವಾಗಿತ್ತು. ಇದು ಕಪೆರ್ನೌಮಿ ಪಟ್ಟಣದ ಹತ್ತಿರವಿರುವ ಚಿಕ್ಕ ಹಳ್ಳಿಯೆಂದು ಅಂದುಕೊಳ್ಳಲಾಗಿದೆ. ಇದರ

ಮೂಲ ಸ್ಥಳವು "Khirbet Kerazeನ ಹತ್ತಿರವಿದ್ದ ಗಲಿಲಾಯ ಸಮುದ್ರದ ಎತ್ತರವಾದ ಗುಡ್ಡದ ಹಿಂದಿನ ಭಾಗದಲ್ಲಿರುತ್ತದೆ, ಇದು ಟೆಲ್‌ಹಮ್ (ಕಪೆರ್ನೌಮಿಗೆ) ಉತ್ತರಕ್ಕೆ ಮೂರು ಮೈಲುಗಳ ದೂರದಲ್ಲಿದೆ."[2] ಖೊರೊಜಿನೇಯಲ್ಲಿ ಯೇಸು ಮಾಡಿದ ಸೇವೆ ಕುರಿತು ಸುವಾರ್ತೆಗಳು ದಾಖಲಿಸಿರುವದಿಲ್ಲ. ಆ ಪಟ್ಟಣದಲ್ಲಿ ನಿರ್ಧಿಷ್ಟವಾದ ಇಂಥಹ ಅದ್ಭುತ ಮಾಡಿದನೆಂದು ನಾವು ತಿಳಿಸಿರುವದಿಲ್ಲ. ಸಹಜವಾಗಿ, ಸುವಾರ್ತೆ ಪ್ರಕಾರ ಕೇವಲ ಮಾದರಿಯಾಗಿ ಯೇಸುವಿನ ಕಾರ್ಯಗಳನ್ನು ದಾಖಲಿಸಲಾಗಿದೆ (ಯೋಹಾನ 20:30; 21:25). ಜನರು ಪ್ರಮಾಣಿಕ ಹೃದಯದಿಂದ ನಂಬುವದಕ್ಕಾಗಿ ಅನೇಕ ಅದ್ಭುತಗಳನ್ನು ಮಾಡಿದನೆಂದು ಆತನ ಹೇಳಿಕೆಯು ಸೂಚಿಸುತ್ತದೆ.

ಎರಡನೆಯದಾಗಿ, ಯೇಸು ಖಂಡಿಸಲ್ಪಟ್ಟಿರುವ ಪಟ್ಟಣ **ಬೆತ್ಸಾಯಿದೆ.** ಈ ಊರು ಮೀನು ಹಿಡಿಯುವ ಹಳ್ಳಿಯಾಗಿತ್ತು, ಇದು ಗಲಿಲಾಯ ಸಮುದ್ರದ ಉತ್ತರಕ್ಕೆ ಸಮುದ್ರದ ದಂಡೆಯಲ್ಲಿದೆ, ಇದಕ್ಕೆ ಪೂರ್ವದಲ್ಲಿ ಯೋರ್ದಾನ ನದಿಯೂ ಇದರಲ್ಲಿ ಸೇರಿಕೊಳ್ಳುತ್ತದೆ (ಮಾರ್ಕ 6:45; 8:22; ಲೂಕ 9:10). ಈ ಊರು ಪೇತ್ರ, ಯೋಹಾನ, ಮತ್ತು ಫಿಲಿಪ್ಪ ಅವರ ಸ್ವಂತ ಊರಾಗಿತ್ತು (ಯೋಹಾನ 1:44). ಯೇಸು ಒಬ್ಬ ಕುರುಡನಿಗೆ ಕಣ್ಣುಕೊಟ್ಟಿರುವದರಿಂದ ದಾಖಲಾಗಿರುವ ಒಂದೇ ಒಂದು ಅದ್ಭುತಕಾರ್ಯ ಈ ಪಟ್ಟಣದೊಂದಿಗೆ ಸಂಬಂಧ ಹೊಂದಿಕೊಂಡಿದೆ (ಮಾರ್ಕ 8:22-26). ಏನೇ ಆದರೂ, ಇತರ ಸ್ವಸ್ಥತಾದ್ಭುತಗಳು ಮತ್ತು ಐದು ಸಾವಿರ ಜನರಿಗೆ ಊಟ ಮಾಡಿಸಿರುವದು ಈ ಊರಿಗೆ ಸಮೀಪದಲ್ಲಿಯೇ ಆಗಿತ್ತು (ಲೂಕ 9:10-17). ಇನ್ನೂ ಅಧಿಕ ಅದ್ಭುತಗಳು ಬೆತ್ಸಾಯಿದೆಯಲ್ಲಿ ನಡೆದಿರುತ್ತವೆ ಅವೆಲ್ಲವುಗಳು ಸುವಾರ್ತೆಯಲ್ಲಿ ದಾಖಲಾಗಿರುವದಿಲ್ಲ.

ಒಂದು ವೇಳೆ ಈ ಎರಡು ಊರುಗಳಲ್ಲಿ ಮಾಡಿದ ಇಂಥಹಾ **ಅದ್ಭುತಗಳು ತೂರ ಮತ್ತು ಸಿದೋನ್** ಪಟ್ಟಣಗಳಲ್ಲಿ ನಡೆದಿದ್ದರೆ, ಆ ಪಟ್ಟಣದ ಜನರು ಬಹಳ ವರ್ಷಗಳ **ಹಿಂದೆಯೇ ಪಶ್ಚಾತ್ತಾಪಪಡುತ್ತಿದ್ದರು** ಎಂದು ಯೇಸು ಹೇಳಿದನು. ತೂರ್ ಮತ್ತು ಸಿದೋನ್ ಸಮುದ್ರ ದಂಡೆಯಲ್ಲಿರುವ ಬಂದರು ಪಟ್ಟಣಗಳಾಗಿದ್ದವು, ಮತ್ತು ಅವರ ಪೂರ್ವಜರು ವ್ಯಾಪಾರಿಗಳು ಮತ್ತು ವಸಹತುಗಾರರು ಆಗಿದ್ದರು ಎಂದು ತಿಳಿದು ಬರುತ್ತದೆ. ಅವರ ಪೂರ್ವಜರು ಹಿಂದಿನ ಕಾಲದ ಚಮತ್ಕಾರಗಳನ್ನು ಮಾಡುತ್ತಿದ್ದರು. ಹಳೆ ಒಡಂಬಡಿಕೆಯಲ್ಲಿ, ತೂರ್, ಸಿದೋನ್ ಜನರು ಬಾಳ ದೇವರಿಗೆ ಆರಾಧಿಸುತ್ತಿದ್ದರು ಮತ್ತು ಅದರಿಂದ ಅವರು ಅನೀತಿವಂತರು ಮತ್ತು ಭ್ರಷ್ಟರು ಎಂದು ಗುರುತಿಸಲ್ಪಟ್ಟರು. ಈ ಎರಡು ಪಟ್ಟಣದವರು ತಮ್ಮ ದುಷ್ಟ ಕಾರ್ಯಗಳಿಗಾಗಿ ಪ್ರವಾದಿಗಳಿಂದ ಖಂಡಿಸಲ್ಪಟ್ಟರು (ಯೆಶಾಯ 23:1-18; ಯೆರೆಮೀಯ 25:22; 47;4; ಯೆಹೆಜ್ಕೇಲನು 26-28; ಆಮೋಸ 1:9, 10).

ಯೇಸು ತೂರ್ ಮತ್ತು ಸಿದೋನ್ ಊರುಗಳ ಹತ್ತಿರದಲ್ಲಿ ಪ್ರಯಾಣ ಮಾಡಿದನು ಮತ್ತು ಆತನು ಅಲ್ಲಿ ಕನಿಷ್ಟ ಒಂದು ಅದ್ಭುತವಾದರು ಮಾಡಿರಬಹುದು (15:21-28). ತೂರ್ ಎನ್ನುವ ಆ ಊರು ಮೆಡಿಟರೇನಿಯನ್ ಸಮುದ್ರ ತೀರದಲ್ಲಿದ್ದು, ಗಲಿಲಾಯ ಸಮುದ್ರದಿಂದ ಸುಮಾರು ಇಪ್ಪತ್ತೈದು ಮೈಲಿಗಳಷ್ಟು ದೂರವಿದೆ ಮತ್ತು ಯೆರೂಸಲೇಮಿನಿಂದ ಸುಮಾರು ನೂರು ಮೈಲಿ ದೂರ ಇರುತ್ತದೆ. ಪೌಲನು ತನ್ನ ಮೂರನೆಯ ಸೇವಾ ಪ್ರಯಾಣಮಾಡಿ ಯೆರೂಸಲೇಮಿಗೆ ಹಿಂತಿರುಗುವಾಗ ಆತನು ಈ ಸ್ಥಳದಲ್ಲಿ ಸ್ವಲ್ಪ ಹೊತ್ತು ನಿಂತುಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 21:3, 4). ಸಿದೋನ ಸಹ ಸಮುದ್ರ ದಂಡೆಯ ಮುಂಭಾಗದ ಮೇಲ್ಗಡೆಯಲ್ಲಿ ಸುಮಾರು ಇಪ್ಪತ್ತು ಮೈಲುಗಳಷ್ಟು ದೂರವಿದೆ. ಪೌಲನು ರೋಮಗೆ ಪ್ರಯಾಣಿಸುವಾಗ ಈ ಸ್ಥಳದಲ್ಲಿಯೂ ಸಹ ಆತನು ಇಳಿದುಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 27:3).

ಯೇಸು ಪಶ್ಚಾತ್ತಾಪ ಕುರಿತು ಮಾತನಾಡುವಾಗ, ಆತನು **ಗೋಣಿತಟ್ಟು** ಮತ್ತು **ಬೂದಿಯ** ಕುರಿತು ಮಾತಾಡಿದ್ದಾನೆ. "ಗೋಣಿಚೀಲ" ಇದನ್ನು ಒಂಟೆ ಅಥವಾ ಆಡುಗಳ ಕೂದಲಿನಿಂದ ನೆಯುತ್ತಾರೆ, ಈ ಚೀಲಗಳನ್ನು ಕಾಳುಗಳನ್ನು ಇತರೆ ವಸ್ತುಗಳನ್ನು ಸಾಗಿಸಲು ಉಪಯೋಗಿ

ಸುತ್ತಿದ್ದರು. ಬಡ ಜನರು ಇವುಗಳನ್ನು ಬಟ್ಟೆಗಳನ್ನು ತಯಾರಿಮಾಡಲು ಉಪಯೋಗಿಸುತ್ತಿದ್ದರು. ಗೋಣಿ ಚೀಲವನ್ನು ಹೊದ್ದುಕೊಂಡು "ಬೂದಿಯಲ್ಲಿ" ಕುಳಿತುಕೊಳ್ಳುವದು ಇದು ಆಳವಾದ ಪಶ್ಚಾತ್ತಾಪ ಮತ್ತು ಆಳವಾದ ದುಃಖವನ್ನು ಸೂಚಿಸುತ್ತದೆ (ಎಸ್ತೆರಳು 4:1; ಯೆಶಾಯ 58:5; ದಾನಿಯೇಲ 9:3; ಯೋಹಾನ 3:6).

**ವಚನ 22. ತೂರ್ ಮತ್ತು ಸಿದೋನ** ಪಟ್ಟಣಗಳು ದುಷ್ಟತನದಿಂದ ಕೂಡಿದ್ದವು, ಖೊರೊಜಿನೋ ಮತ್ತು ಬೆತ್ಸಾಯಿದೋ ಇವುಗಳಿಂದ ಹೆಚ್ಚಿನ ದುಷ್ಟತನ ಹೊಂದಿದ್ದರಿಂದ **ನ್ಯಾಯತೀರ್ಪಿನ ದಿನದಲ್ಲಿ** ಇವುಗಳ ಗತಿಯು ಖೊರೊಜಿನೋ ಮತ್ತು ಬೆತ್ಸಾಯಿದೋ ಈ ಪಟ್ಟಣಗಳಿಗಿಂತಲು ಕಠಿಣವಾಗಿರುತ್ತದೆಂದು ಯೇಸು ಹೇಳಿದನು. ಯಾಕೆ ಈ ರೀತಿಯಾಗಿ ಹೇಳಿದನು? ಖೊರೊಜಿನೋ ಮತ್ತು ಬೆತ್ಸಾಯಿದೋ ನೋಡಿದ ಅದ್ಭುತಗಳನ್ನು ಇದೆ ತೂರ್ ಮತ್ತು ಸಿದೋನ್ ಪಟ್ಟಣದವರು ನೋಡಿದ್ದರೆ ಅವರು ಆಗಲೆ ಪಶ್ಚಾತ್ತಾಪಪಡುತ್ತಿದ್ದರು ಎಂದು ಹೇಳಿದನು. ವಾಸ್ತವವಾಗಿ, ಈ ಎರಡು ಪಟ್ಟಣಗಳಲ್ಲಿ ಶಿಷ್ಯರು ಆದಿ ಸಭೆಯ ಇತಿಹಾಸದ ತರುವಾಯ, ಇದ್ದರು ಎಂದು ಲೂಕನ ದಾಖಲಾತಿ ತೋರಿಸುತ್ತದೆ (ಅಪೊಸ್ತಲರ ಕೃತ್ಯಗಳು 21:3-6; 27:3; ನೋಡಿರಿ 10:15ರ ಮೇಲಿನ ವ್ಯಾಖ್ಯಾನ).

## "ಹೆಚ್ಚಿಸಿಕೊಳ್ಳುವ" ಪಟ್ಟಣವು ಖಂಡಿಸಲ್ಪಟ್ಟಿತು (11:23, 24)

**23ಎಲಾ ಕಪೆರ್ನೌಮೇ, ನೀನು ಪರಲೋಕಕ್ಕೆ ಏರಿಸಲ್ಪಡುವಿಯಾ? ಪಾತಾಳಕ್ಕೇಇಳಿಯುವಿ. ನಿನ್ನಲ್ಲಿ ನಡೆದ ಮಹತ್ಕಾರ್ಯಗಳು ಸೊದೋಮಿನಲ್ಲಿ ನಡೆದಿದ್ದರೆ ಅದು ಇಂದಿನವರೆಗೂ ಉಳಿಯುತ್ತಿತ್ತು. 24ಆದರೆ ನ್ಯಾಯ ವಿಚಾರಣೆಯ ದಿನದಲ್ಲಿ ನಿನ್ನ ಗತಿಗಿಂತಲೂ ಸೊದೋಮ್ ಸೀಮೆಯ ಗತಿಯು ಮೇಲಾಗಿರುವದು ಎಂದು ನಿಮಗೆ ಹೇಳುತ್ತೇನೆ ಅಂದನು.**

**ವಚನಗಳು 23, 24. ಕಪೆರ್ನೌಮೆ** ಈ ಊರು ಗಲಿಲಾಯ ಸಮುದ್ರ ದಂಡೆಯಲ್ಲಿ ನೈರುತ್ಯ ಭಾಗದಲ್ಲಿ ಇರುತ್ತದೆ. ಈಗಾಗಲೇ ನಾವು ಗಮನಿಸಿದಂತೆ, ಈ ಸ್ಥಳವು ಯೇಸುವಿನ ಸೇವೆಯ ಸಮಯದಲ್ಲಿ ಆತನ ಸ್ವಂತ ಮನೆ ಇದ್ದಂತೆ ಇದ್ದಿತು (4:13; 8:5; 9:1ರ ಮೇಲಿನ ವ್ಯಾಖ್ಯಾನ ನೋಡಿರಿ). ಕರ್ತನ ಅನೇಕ ಮಹತ್ತಾದ ಅದ್ಭುತಗಳು ಕಪೆರ್ನೌಮಿನಲ್ಲಿ ನಡೆದವು (8:5-17; 9:1-8, 18-26; ಮಾರ್ಕ 1:21-28; ಯೋಹಾನ 4:46-54). ಮತ್ತಾಯ ಸುವಾರ್ತೆಯ 8 ಮತ್ತು 9ನೇ ಅಧ್ಯಾಯದಲ್ಲಿ ದಾಖಲಿಸಿರುವ ಹತ್ತರಲ್ಲಿ ಐದು ಅದ್ಭುತಗಳು ಅಲ್ಲಿ ನಡೆದವು.

ಕಪೆರ್ನೌಮ ಪಟ್ಟಣ ಸಮೃದ್ಧವಾಗಿದ್ದು, ಸ್ವಯಂ ತೃಪ್ತಿಕರವಾಗಿದೆ ಮತ್ತು ಪ್ರಪಂಚದಲ್ಲಿ ಸುರಕ್ಷಿತ ಸ್ಥಳವಾಗಿದೆ. ಈ ಪಟ್ಟಣ ತನ್ನ ಸ್ವಂತ ಲೆಕ್ಕ ಚಾರದ ಪ್ರಕಾರ, ಪಟ್ಟಣವು **ಪರಲೋಕಕ್ಕೆ ಏರಿಸಲ್ಪಟ್ಟಿ**ದೆ. ಕಪೆರ್ನೌಮ ಆ ರೀತಿಯಲ್ಲಿ ಹೆಚ್ಚಿಸಿಕೊಂಡರೂ, ಇದನ್ನು **ಪಾತಾಳಕ್ಕೇ** ಇಳಿಸಲ್ಪಡುವದು. ಯೇಸು ಈ ಭಾಷೆಯನ್ನು ಯೆಶಾಯ ಪುಸ್ತಕದಿಂದ ಗರ್ವದಿಂದ ತುಂಬಿದ ಬಾಬೆಲ್ ರಾಜನ ವಿರುದ್ಧವಾದ ಮಾತುಗಳಿಂದ ತೆಗೆದುಕೊಂಡಿರಬಹುದು: "ನಿನ್ನ ಮನಸ್ಸಿನಲ್ಲಿ ನೀನು ಆಕಾಶಕ್ಕೆ ಹತ್ತಿ; ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿಸಿ ಅಸೀನನಾಗುವೆನು ... ಆದರೆ ನೀನು ಪಾತಾಳಕ್ಕೆ ಆದೋಲೋಕದ ಆಗಾದ ಸ್ಥಳಗಳಿಗೆ ತಳ್ಳಲ್ಪಡುತ್ತಿದ್ದಿ" (ಯೆಶಾಯ 14:13-15).

"ಪಾತಾಳ" ಎಂದು ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಿರುವದು ಹಳೆ ಒಡಂಬಡಿಕೆಯಲ್ಲಿ "ಅಗಾದ ಸ್ಥಳ" ಎಂದು ಉಪಯೋಗಿಸಿದ ರೀತಿಯಲ್ಲಿದೆ. ಇದನ್ನು "ಸಮಾಧಿ," "ಸತ್ತ ಸ್ಥಿತಿ," ಮತ್ತು "ಯಾತನೆ" ಎಂದು ಸೂಚಿಸಬಹುದು. Leon Morris ರವರು ಹೀಗೆ ವಿವರಿಸಿದ್ದಾರೆ, "*ಪಾತಾಳವು* ಕಾಣದ ಲೋಕ, ಇಲ್ಲಿ ಅದು ಕನಿಷ್ಟವಾದ ಸ್ಥಳಕ್ಕೆ ಸೂಚನೆಯಾಗಿದೆ, ಹಾಗೆಯೇ *ಪರಲೋಕ* ಎತ್ತರವಾದ ಶ್ರೇಷ್ಠವಾದ ಸ್ಥಳ ಸೂಚಿಸುತ್ತದೆ."[3]

ಮೊದಲನೆಯ ಶತಮಾನದ ಪಟ್ಟಣದ ಪ್ರಸಿದ್ಧತೆಯನ್ನು ಮತ್ತು ತರುವಾಯ ದಿನಗಳಲ್ಲಿ ಬರುವ ವಿನಾಶವನ್ನು ಹೇಳಲು "ಆಕಾಶದಷ್ಟು ಎತ್ತಲ್ಪಡುವರು" "ಅಲ್ಲಿಂದ ಪಾತಾಳಕ್ಕೆ ಕೆಳಗೆ ತಳ್ಳಲ್ಪಡುವದು" ಎಂಬ ರೂಪಕಾಲಂಕಾರವು ಉಪಯೋಗಿಸಲಾಗಿದೆ.[4]

ನಮಗೆ ತಿಳಿದಂತೆ, ಕಪೆರ್ನೌಮ ಪಟ್ಟಣ ಅನೀತಿಯಂತೆ ಅಥವಾ ಅನೈತಿಕ ಲೈಂಗಿಕತೆಯ ವಿಷಯದಲ್ಲಿ ಗದರಿಕೆಗೆ ಒಳಗಾಗಲಿಲ್ಲ. ಆದಾಗ್ಯೂ ಯೇಸು ಇದನ್ನು **ಸೊದೊಮಗೆ** ಹೋಲಿಸಿದ್ದಾನೆ. ಹಳೆ ಒಡಂಬಡಿಕೆಯ ಪಟ್ಟಣವು ದುಷ್ಟತನದಲ್ಲಿ ಸರಿಸಮ ಹೋಲಿಕೆ ರೂಪ ಹೊಂದಿತು (ಆದಿಕಾಂಡ 19:24; ಧರ್ಮೋಪದೇಶಕಾಂಡ 32:32; ಯೆಶಾಯ 1:9, 10; ಯೆರೆಮೀಯ 49:18; ಪ್ರಲಾಪಗಳು 4:6; ಯೆಹೆಜ್ಕೇಲನು 16:48; ಮತ್ತಾಯ 10:15; 2 ಪೇತ್ರ 2:6). ಅದರಿಂದ ಪಟ್ಟಣದಲ್ಲಿ ಲೈಂಗಿಕ ದುಷ್ಟಕಾರ್ಯ ಎಲ್ಲಾ ಕಡೆ ಹರಡಿತ್ತು ಅದಕ್ಕಾಗಿ ಆ ಪಾಪ ಮತ್ತು ಆ ಪಾಪವನ್ನು ಮಾಡುವವರನ್ನು ಗುರುತಿಸಲು "ಪರಸ್ಪರ ಕೂಡುವದು" ಮತ್ತು "ಒಬ್ಬರಿಗೊಬ್ಬರು ಸೇರುವದು" ಎಂದು ಹೇಳುವ ಪದಗಳನ್ನು ಉಪಯೋಗಿಸುತ್ತಿದ್ದರು.

ಕಪೆರ್ನೌಮಿನ ಪರಿಸ್ಥಿತಿ ಸೊದೊಮಗಿಂತಲೂ ಕೆಟ್ಟದ್ದಾಗಿ ಇರುತ್ತದೆಂದು ಪರಿಗಣಿಸಲಾಗಿದೆ. ಕಪೆರ್ನೌಮಿನಲ್ಲಿ ನಡೆದಂತಹ **ಮಹತ್ಕಾರ್ಯಗಳು** ಒಂದು ವೇಳೆ **ಸೊದೊಮ** ಪಟ್ಟಣದಲ್ಲಿ ನಡೆದಿದ್ದರೆ, ಆ ಪಟ್ಟಣವು ನಾಶನದಿಂದ ತಪ್ಪಿಸಿಕೊಳ್ಳಬಹುದಾಗಿತ್ತು. ಈ ಕಾರಣಕ್ಕಾಗಿಯೇ, ಖೊರೊಜಿನೇಗೆ ಮತ್ತು ಬೆತ್ಸಾಯಿದಗೆ ಮಾಡಿದ ವ್ಯಾಖ್ಯಾನವನ್ನು ಯೇಸು ಕಪೆರ್ನೌಮಿಗೆ ಪುನರಾವರ್ತಿಸಿದನು: **ನ್ಯಾಯ ವಿಚಾರಣೆಯ ದಿನದಲ್ಲಿ ನಿನ್ನ ಗತಿಗಿಂತಲೂ ಸೊದೊಮ ಗತಿಯು ಮೇಲಾಗಿರುವದು ಎಂದು ಹೇಳಿದನು** (10:15; 11:22ರ ಮೇಲಿನ ವ್ಯಾಖ್ಯಾನ ನೋಡಿರಿ).

## ಪಾಠಗಳು

### ಪಶ್ಚಾತ್ತಾಪಪಡದ ಪಟ್ಟಣಗಳು (11:20-24)

ಪ್ರಪಂಚದಲ್ಲಿ ಎಷ್ಟು ಪಟ್ಟಣಗಳು ಕ್ರಿಸ್ತನ ಕುರಿತು ಕಲಿಯಲು ಮತ್ತು ಆತನ ಹಿಂದೆ ಹೋಗುವ ಶ್ರೇಷ್ಠ ಅವಕಾಶವನ್ನು ಹೊಂದಿವೆ? ಇತರರು ಸತ್ಯಕ್ಕಾಗಿ ಅವರು ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ತೋರಿಸದೆ ಇರಬಹುದು. ಪ್ರಪಂಚದ ಅನೇಕ ಭಾಗಗಳಲ್ಲಿ ರೇಡಿಯೋ ಮುಖಾಂತರ ದೂರದರ್ಶನ ಮುಖಾಂತರ ಕೇಳುವಂಥಹ ಅವಕಾಶ ಹೊಂದಿದ್ದಾರೆ. ಅವರು ತಮ್ಮ ಸ್ವಂತ ಭಾಷೆಯಲ್ಲಿಯೇ ಸಾಕಷ್ಟು ಸತ್ಯವೇದವನ್ನು ಹೊಂದಿದ್ದಾರೆ. ಅಷ್ಟು ಮಾತ್ರವಲ್ಲದೆ, ಅವರ ಮಧ್ಯದಲ್ಲಿ ನಂಬಿಗಸ್ತ ಕ್ರೈಸ್ತರು ಜೀವಿಸುತ್ತಾ ಕ್ರಿಸ್ತನ ಬೆಳಕು ಅವರ ಮೇಲೆ ದಿನಾಲು ಚೆಲ್ಲುತ್ತಾ ಇರಬಹುದು. ಬಹುಶಃ ಆ ಜನರು ದೊಡ್ಡ ಆಪತ್ತು ಅವರ ಸಮೂಹವನ್ನು ಹಿಡಿದುಕೊಂಡಿರುವಾಗ ಕ್ರೈಸ್ತರ ಉದಾರತೆಯಿಂದ ಆಶೀರ್ವದಿಸಲ್ಪಟ್ಟರು. ಏನೇ ಆದರೂ, ಇಂಥಹ ಅನೇಕ ಅವಕಾಶಗಳಿದ್ದರೂ ಸಹ ಅವರು ಕ್ರಿಸ್ತನನ್ನು ನಿರಾಕರಿಸಿದರು. ಇದಕ್ಕೆ ಭಿನ್ನವಾಗಿ, ಇನ್ನು ಅನೇಕರು ಕ್ರಿಸ್ತನ ಕುರಿತು ಕೇಳಿಸಿಕೊಳ್ಳಲಿಲ್ಲ ಮತ್ತು ಅವರ ಸ್ವಂತ ಭಾಷೆಯಲ್ಲಿ ಸಾಕಷ್ಟು ಸತ್ಯವೇದಗಳಿಲ್ಲ. ಅವರ ಸಮೂದಾಯಗಳಲ್ಲಿ ಸ್ವಲ್ಪವಾದರೂ ಕ್ರೈಸ್ತರ ಇರುವಿಕೆಯು ಇಲ್ಲದೆ ಇರುವ ಪರಿಸ್ಥಿತಿಯಿದೆ. ನಿಶ್ಚಯವಾಗಿ, ಯಾರಿಗೆ ಹೆಚ್ಚಿನ ಅವಕಾಶಕೊಡಲ್ಪಟ್ಟಿತ್ತೋ ಅಂಥವರು ಬಹಳ ಕಠಿಣವಾಗಿ ನ್ಯಾಯತೀರ್ಪಿಗೆ ಒಳಗಾಗುವರು.

David Stewart

### ದೈವೀಕತೆಯ ವಿರೋಧಾಭಾಸ (11:23)

ಕ್ರಿಸ್ತನನ್ನು ವಿರೋಧಿಸುವ ಜನರು ಈ ಜೀವಿತಕಾಲದಲ್ಲಿ ಆಗಿಂದಾಗ್ಗೆ ಎಷ್ಟು

ಯಶಸ್ವಿಯಾಗಿರಬಹುದು! ಬಹುಶಃ ಅವರಿಗೆ ದೊಡ್ಡ ಬಲ ಹೊಂದಿರುವ ಉದ್ಯೋಗ ವಿರಬಹುದು, ದೊಡ್ಡದಾದ ಬಹಳಷ್ಟು ಹಣ ಬ್ಯಾಂಕನಲ್ಲಿ ಇಟ್ಟಿರಬಹುದು, ಮತ್ತು ವೈಭವದ ಮನೆಗಳು ಇದ್ದಿರಬಹುದು. ಈ ಎಲ್ಲಾ ಭೌತಿಕ ತೋರಿಕೆಯಿಂದ, ಅವರು ಎಲ್ಲಾವನ್ನು ಹೊಂದಿದವರಂತೆ ಕಾಣುವರು. ಅವರು "ಅತಿಯಾಗಿ ಪ್ರಶಂಸಿಸಲ್ಪಟ್ಟರಾಗಿ" ಕಾಣಬಹುದು.

ಇಂಥಹಾ ಹೆಚ್ಚಿನ ಹೊಗಳಿಕೆ ವಾಸ್ತವವಾಗಿರದೆ ಕಲ್ಪಿಸಿಕೊಂಡಿದ್ದಿರಬಹುದೆಂದು ಯೇಸು ಎಚ್ಚರಿಸಿದರು; ಇದು ಕೇವಲ ಅಲ್ಪಕಾಲದ ಜೀವಿತವಾಗಿದೆ. ಆತನು ಹೆಚ್ಚಿನ ಅದ್ಭುತಗಳನ್ನು ಮಾಡಿ ದಾಖಲಿಸಲ್ಪಟ್ಟಿರುವ ಪಟ್ಟಣದ ಜನರು ಪಶ್ಚಾತ್ತಾಪಪಡದೆ ಹೋದಾಗ ಯೇಸು ಆ ಪಟ್ಟಣಗಳನ್ನು ಖಂಡಿಸಿದನು. "ಮತ್ತು ನೀನು, ಕಪೆರ್ನೌಮಿಯೇ ಪರಲೋಕಕ್ಕೆ ಏರಿಹೋಗು ವದಿಲ್ಲ, ನಿನಗೆ ಹೋಗಲು ಆಗುವದೋ? ಅಲ್ಲಿಂದ ನಿನ್ನನ್ನು ಅದೋಲೋಕಕ್ಕೆ ಇಳಿಸುವೆನು" ಎಂದು ಆತನು ಹೇಳಿದನು (11:23). ಅವರು ರಕ್ಷಕನ ಕಡೆಗೆ ತಿರುಗಲಿಲ್ಲವಾ ದ್ದರಿಂದ ಅವರ ಮಹಿಮೆಯುಳ್ಳ ಸ್ಥಿತಿ ಗತಿಯು ಅಂತ್ಯವಾಗುವದು.

ಸುವಾರ್ತೆಗಳಲ್ಲಿ ಅನೇಕ ಸಾರಿ ಇಂಥಹ ದೈವೀಕ ವಿರೋಧಾಭಾಸ ಯೇಸುವಿನಿಂದ ಹೇಳಲ್ಪಟ್ಟಿದೆ: "ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು; ಮತ್ತು ತಗ್ಗಿಸಲ್ಪಡುವವನು ಹೆಚ್ಚಿಸಲ್ಪಡುವನು" (23:12; ನೋಡಿರಿ ಲೂಕ 14:11; 18:14). David Stewart

---

ಟಿಪ್ಪಣಿಗಳು

[1]William Barclay, *The Gospel of Matthew,* vol. 2, 2d ed., The Daily Study Bible (Philadelphia: Westminster Press, 1958), 13. [2]Jack P. Lewis, *The Gospel According to Matthew,* Part 1, The Living Word Commentary (Austin, Tex.: Sweet Publishing Co., 1976), 164. [3]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 290. [4]J. W. McGarvey, *The New Testament Commentary,* vol. 1*, Matthew and Mark* (N.p., 1875; reprint, Delight, Ark.: Gospel Light Publishing Co., n.d.), 101.